ಬೆಂಗಳೂರು ಉತ್ತರ ನಗರ ಪಾಲಿಕೆ

ಅಧೀಕ್ಷಕ ಅಭಿಯಂತರರು ವಲಯ-2 ರವರ ಕಛೇರಿ, 3ನೇ ಮಹಡಿ,
ಮಿನಿ ವಿಧಾನಸೌಧ, ಎನ್.ಇ.ಎಸ್ ಹತ್ತಿರ, ಯಲಹಂಕ, ಬೆಂಗಳೂರು-64.

ಸಂಖ್ಯೆ: ಬೆಂ.ಉ.ನ.ಪಾ/ಅ.ಅ(ವ-2)/ತಾ.ಮ./14 /2026-27 ದಿನಾಂಕ: 11.05.2026

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ: Upgradation of Street lighting system by replacing damaged poles, panel boards, control switches and installation of new poles at dark stretches of Dasarahalli Zone ward no 15 to 25 ರ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಬಿ.ಎನ್.ಸಿ.ಸಿ ರವರ ಆಡಳಿತಾತ್ಮಕ ಅನುಮೋದನೆ ಸಂಖ್ಯೆ: ಬೆಂ.ಉ.ನ.ಪಾ/ಕಾ.ಪಾ.ಅ/ಆ.ಅ/01/2026-27, ದಿನಾಂಕ: 01.04.2026.

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಬಿ.ಎನ್.ಸಿ.ಸಿ ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.266.00 ಲಕ್ಷಗಳ ಮೊತ್ತಕ್ಕೆ ತಯಾರಿಸಿ, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಬಿ.ಎನ್.ಸಿ.ಸಿ ರವರ ಪ್ರಸ್ತಾವನೆಯನ್ನು ಪರಿಗಣಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

Upgradation of Street lighting system by replacing damaged poles, panel boards, control switches and installation of new poles at dark stretches of Dasarahalli Zone ward no 15 to 25 ರ ಕಾಮಗಾರಿಯ ಅಂದಾಜು ಮೊತ್ತ ರೂ.266.00 ಲಕ್ಷಗಳಿಗೆ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ನಡವಳಿಗಳು ವಿಷಯದ ಸಂಖ್ಯೆ :202/2025-26, ದಿನಾಂಕ:- 05.07.2025 ರಂತೆ 2025-26ನೇ ಸಾಲಿನ ಆಯವ್ಯಯದ ಬಜೆಟ್ ಹೆಡ್ 05-220902 Repairs & Maintenance Annual Street Light Maintenance (Package) ಗೆ ಅನುಮೋದನೆ ನೀಡಿರುತ್ತಾರೆ. ಆದ್ದರಿಂದ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ ಕ್ರಮ ಸಂಖ್ಯೆ.....14..... ಮತ್ತು ಪುಟ ಸಂಖ್ಯೆ: .....ರಲ್ಲಿ ನೋಂದಾಯಿಸಿ, ರೂ.266.00 ಲಕ್ಷಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

1. ಈ ಹಿಂದೆ ತಾಂತ್ರಿಕ ಮಂಜೂರಾತಿ ನೀಡಲಾದ ಅಂದಾಜುಗಳಲ್ಲಿನ ಬಾಬ್ತುಗಳ ಮತ್ತು ಬಾಬ್ತುಗಳ ಪರಿಮಾಣಗಳು ಈ ಅಂದಾಜುನಲ್ಲಿ ಮರುಕಳಿಸಿದಿರುವುದಕ್ಕೆ ಪರಿಶೀಲಿಸಿ ಧೃಢೀಕರಿಸಿಕೊಂಡ ನಂತರವೇ ಈ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಯಮ 1999 ಮತ್ತು ನಿಯಮ 2000 ಪ್ರಕಾರ ಕಾಮಗಾರಿಯ ಟೆಂಡರ್ ಕರೆಯುವಲ್ಲಿ ಸೂಕ್ತ ಕ್ರಮ ಅನುಸರಿಸತಕ್ಕದ್ದು.
3. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ನೀಡಿರುವ ಕಾಮಗಾರಿ ಸ್ಥಳದ ತಪಾಸಣೆ ಮಾಡಿರುವುದಾಗಿ ಹಾಗೂ ಅವಶ್ಯಕ ಬಟಂಗಳನ್ನು ಅಳವಡಿಸಿಕೊಂಡಿರುವುದಾಗಿ ಅಂದಾಜಿನೊಂದಿಗೆ ಧೃಢೀಕರಣ ಪತ್ರಕ್ಕೆ ಒಳಪಟ್ಟಿರುತ್ತದೆ.
4. ಅಂದಾಜು ಪಟ್ಟಿಯ ಮೊತ್ತವು ಮಂಜೂರಾತಿಯಾದ ಮೊತ್ತಕಿಂತ ಮೀರಬಾರದು, ಹಾಗೂ ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.

ಪು.ತಿ.ನೋ.

5. ಅಂದಾಜಿನ ಪರಿಮಾಣಗಳನ್ನು ಮತ್ತು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳತಕ್ಕದ್ದು ಹಾಗೂ ಕಾಮಗಾರಿಯನ್ನು ಐ.ಆರ್.ಸಿ/ಐ.ಎಸ್ ಮಾರ್ಗ ಸೂಚಿಗಳಂತೆ ಮತ್ತು ನಿಗಧಿತ ವಿಶಿಷ್ಟ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದು.
6. ವಾರ್ಡಿನಲ್ಲಿ ಪ್ರತಿ ನಿತ್ಯ ಸ.ಅ/ಸ.ಕಾ.ನಿ.ಅ ರವರಿಂದ ಪರಿವೀಕ್ಷಣೆ ಸಮಯದಲ್ಲಿ ಗುರುತಿಸಿರುವ ನಿರ್ವಹಣೆಕಾರ್ಯಕ್ಕೆ ಸಂಬಂಧಿಸಿದಂತೆ ಅಂಶಗಳನ್ನು ದಾಖಲೆ ಪುಸ್ತಕ ಹಾಗೂ ಛಾಯಾಚಿತ್ರ (ಪೂರ್ವ, ಪ್ರಗತಿ ಹಾಗೂ ಪೂರ್ಣಗೊಂಡ ನಂತರ) ಪುಸ್ತಕ ಕಟ್ಟು ನಿಟ್ಟಾಗಿ ನಿರ್ವಹಿಸಲು ಪರತ್ತಿಗೆ ಒಳಪಟ್ಟಿರುತ್ತದೆ.
7. ಮಂಜೂರಾದ ಕಾಮಗಾರಿಯಲ್ಲಿ ಯಾವುದೇ ಬದಲಾವಣೆ ಅಥವಾ ಮರ್ಪಾಡು ಆಗಿದ್ದಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತದೆ.
8. ಅಂದಾಜಿನಲ್ಲಿ ಹಲವಾರು ಐಟಂಗಳಿಗೆ ಡಾಟಾ ದರಗಳನ್ನು ಅನುಮೋದಿಸಿರುವಂತೆ ಅಂದಾಜು ಪಟ್ಟಿಯಲ್ಲಿ ಅಳವಡಿಸಲಾಗಿರುತ್ತದೆ.ಈ ಡಾಟಾ ದರಗಳನ್ವಯ ಈ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.
9. ಕೈಗೊಳ್ಳವ ಸದರಿ ಕಾಮಗಾರಿಯು ಪುನರಾವರ್ತನೆ ಅಥವಾ ನಕಲು ಆಗಿರುವುದಿಲ್ಲವೆಂಬ ಬಗ್ಗೆ ಸಂಬಂಧಪಟ್ಟ ಅಭಿಯಂತರರು, ಟಿಪ್ಪಣಿ ಹಾಳೆಯಲ್ಲಿ ಹಾಗೂ ಅಂದಾಜು ಪಟ್ಟಿಯಲ್ಲಿ ಧೃಢೀಕರಿಸುವುದು, ಮೇಲಾಧಿಕಾರಿಗಳಿಗೆ ಮಾಹಿತಿ ಒದಗಿಸುವಲ್ಲಿ ಮರೆ ಮಾಚಿದ್ದಲ್ಲಿ ಹಾಗೂ ಅಂದಾಜು ಪಟ್ಟಿ ತಯಾರಿಸುವಲ್ಲಿ ಯಾವುದಾದರೂ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ವಾರ್ಡಿನ ಸಹಾಯಕ/ಕಿರಿಯಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರುಗಳೆ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
10. ಪ್ರಸ್ತಾಪಿತ ಕಾಮಗಾರಿಯಲ್ಲಿ ಅನುಮೋದನೆಯಾಗಿರುವ ಐಟಂಗಳು ಮತ್ತು ಪ್ರಾವದಾನಗಳು ಇತರೆ ಯಾವುದೇ ಅನುಮೋದಿತ ಕಾಮಗಾರಿಗಳಲ್ಲಿ ಸೇರದೇ ಇರುವುದನ್ನು ಧೃಢೀಕರಿಸಿಕೊಳ್ಳುವ ಪರತ್ತಿಗೆ ಒಳಪಟ್ಟಿದೆ.
11. ಪ್ರಸ್ತಾಪಿತ ಕಾಮಗಾರಿಯನ್ನು ನಿರ್ವಹಿಸುವಾಗ ಅಂದಾಜಿನಲ್ಲಿ ಅಳವಡಿಸಿರುವ ಪ್ರಾವದಾನಗಳು / ವಿನ್ಯಾಸಗಳಲ್ಲಿ ಯಾವುದೇ ಬದಲಾವಣೆಗಳು ಆದಲ್ಲಿ ಸೂಕ್ತ ವಿನ್ಯಾಸಗಳಲ್ಲಿ ಬಗ್ಗೆ ಪರಿಶೀಲಿಸಿ/ವರದಿಸಿ ಮೇಲಾಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸುವ ಪರತ್ತಿಗೆ ಒಳಪಟ್ಟಿರುತ್ತದೆ.
12. ಕಾಮಗಾರಿಯನ್ನು ನಿರ್ವಹಿಸುವಾಗ ಕಾಮಗಾರಿ ಸ್ಥಳದ ಬಗ್ಗೆ ಯಾವುದೇ ವಿವಾದ / ತಕರಾರು ಗಳಾದಲ್ಲಿ ಅಥವಾ ಕಾಮಗಾರಿ ಸ್ಥಳದ ಬದಲಾವಣೆ ಅನಿವಾರ್ಯವಾದಲ್ಲಿ ಸಕ್ಷಮ ಪ್ರಾಧಿಕಾರ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.
13. ಕಾಮಗಾರಿಯ ಶೆಡ್ಯೂಲ್-ಬಿ ಯಲ್ಲಿರುವ ಎಲ್ಲಾ ಐಟಂ ಗಳ ಕಾಮಗಾರಿ ಮುಂಚಿತವಾಗಿ/ನಿರ್ವಹಿಸುವ ಸಮಯದಲ್ಲಿ / ಕಾಮಗಾರಿ ಪೂರ್ಣಗೊಂಡ ನಂತರ ಜಿಯೋ ಟ್ಯಾಗ್ ಛಾಯಾ ಚಿತ್ರಗಳನ್ನು ಕಡ್ಡಾಯವಾಗಿ ಗುಣ ನಿಯಂತ್ರಣ ವರದಿಯೊಂದಿಗೆ ಬಿಲ್ ಪಾವತಿಗಾಗಿ ಸಲ್ಲಿಸುವುದು.
14. ಲೋಕೋಪಯೋಗಿ ಇಲಾಖೆ ದರ ಪಟ್ಟಿಯಲ್ಲಿ ಲಭ್ಯವಿಲ್ಲದ ಐಟಂಗಳಿಗೆ (Data Rate, Market rate & Etc)ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
15. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಿಗಂಟು ರೂಪದಲ್ಲಿ Lumpsum Provisions ಒದಗಿಸಲಾಗಿರುವ ಮೊತ್ತ ಗಳಿಗೆ ಉಪ ಅಂದಾಜನ್ನು ತಯಾರಿಸಿ ಅನುಮೋದನೆ ಪಡೆಯತಕ್ಕದ್ದು.
16. ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸುವಾಗ Standard Tender Document KW-1/2/3/4 ಹಾಗೂ ಆಗಿಂದ್ದಾಗೆ ಹೊರಡಿಸುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಟೆಂಡರ್ಆಹ್ವಾನಿಸ ತಕ್ಕದ್ದು.
17. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್ ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02-11-2017 ರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಆ/ಪಿ. ಆರ್/5054/2017-18, ರಂತೆ ಕ್ರಮ ವಹಿಸುವುದು.
18. ಅಂದಾಜು ಪಟ್ಟಿಯಲ್ಲಿ ಪ್ರಾವದಾನ ಮಾಡಿರುವ ಐಟಂ ಗಳ ಮತ್ತು ಅಳವಡಿಸಿರುವ ದರಗಳ ಬಗ್ಗೆ ಸಂಬಂಧಿಸಿದ ಸಹಾಯಕ/ಕಿರಿಯಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರು ರವರುಗಳು ಸಹಿಯೊಂದಿಗೆ ಸಲ್ಲಿಸಿರುವ ವರದಿಯ ಮೇರೆಗೆ ಹಾಗೂ ಧೃಢೀಕರಿಸಿಕೊಳ್ಳುವ ಪರತ್ತಿಗೊಳಪಡಿಸಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಅಧೀಕ್ಷಕ ಅಭಿಯಂತರರು, ವಲಯ-02
ಬೆಂಗಳೂರು ಉತ್ತರ ನಗರ ಪಾಲಿಕೆ

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಬಿ.ಎನ್.ಸಿ.ಸಿ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಉಪ ನಿಯಂತ್ರಕರು ಹಣಕಾಸು, ಬೆಂ.ಉ.ನ.ಪಾಲಿಕೆ ರವರ ಮಾಹಿತಿಗಾಗಿ.
3. ಕಛೇರಿ ಕಡತಕ್ಕೆ.